## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯದರ್ಶಿ/ವಾರ್ಡ್ ಸಮಿತಿ ಸಹಾಯಕಅಭಿಯಂತರರಕಛೇರಿ ವಾರ್ಡ್ ಸಂಖ್ಯೆ: 137 ಜೆ.ಜೆ.ಆರ್ ನಗರ ಬೆಂಗಳೂರು

ಸಂಖ್ಯೆ: w-137/Committee/Proceding -35/2021-22 dt. 18-04-2022

### ಸಭೆಯ ನಡವಳಿಗಳು

ಶ್ರೀ ಸತೀಶ್ ಕುಮಾರ್ ಸಮಿತಿಯ ಕಾರ್ಯದರ್ಶಿಗಳು ಸಭೆಯನ್ನು ನಡೆಸುತ್ತಾ ಸಭೆಯಲ್ಲಿ ಉಪಸ್ಥಿತಗೊಂಡಿರುವ ಮಾನ್ಯ ಶ್ರೀ. ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ಕಾಮಗಾರಿ) ವಸಂತನಗರ ಉಪ ವಿಭಾಗ ಬಿ.ಬಿ.ಎಂ.ಪಿ, ಹಾಗೂ ಅಧ್ಯಕ್ಷರು ಮತ್ತು ವಾರ್ಡ್‌ನ ನೋಡೆಲ್ ಅಧಿಕಾರಿ ವಾರ್ಡ್ ಸಂಖ್ಯೆ 137 ರವರ ಅಧ್ಯಕ್ಷತೆಯಲ್ಲಿ ಸಭೆಯಲ್ಲಿ ಅಗಮಿಸಿರುವ ಎಲ್ಲಾ ಅಧಿಕಾರಿಗಳಿಗೆ ಸಭೆಗೆ ಸ್ವಾಗತಕೋರಿದರು. ನಂತರ ಮಾನ್ಯ ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಮುನ್ನಡೆಸಲಾಯಿತು

### ಸಭೆಯಲ್ಲಿಚರ್ಚಿಸಲಾದ ವಿಷಯಗಳು

ಮೊದಲಿಗೆ ಈ ಹಿಂದಿನ ಸಭೆಯಲ್ಲಿ ಚರ್ಚಿಸಲಾದ ವಿಷಯಗಳ ಬಗ್ಗೆ ಗಮನಹರಿಸುತ್ತಾ ಹಾಗೂ ಸಾರ್ವಜನಿಕರಿಂದ ಬಂದ ದೂರುಗಳನ್ನು ಪರಿಹರಿಸಿದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಸಹಾಯಕ ಕಾರ್ಯನಿರ್ವಹಕ ಅಧಿಕಾರಿಗಳ ಪ್ರತಿನಿಧಿ ಹಾಗೂ ಕೆಲಸ ಪರಿವೀಕ್ಷಕರು ದೂರು ಪುಸ್ತಕವನ್ನು ಸಭೆಯಲ್ಲಿ ನೀಡಿ ಸಾರ್ವಜನಿಕರಿಂದ ಬಂದ ದೂರುಗಳ ಪಟ್ಟಿ ಮತ್ತು ದೂರುಗಳನ್ನು ಪರಿಹರಿಸಿದ ದಿನಾಂಕ ಮತ್ತು ವಿವರಗಳನ್ನು ಸಭೆಯಲ್ಲಿ ಮಂಡಿಸಿದರು.

ಅಧ್ಯಕ್ಷರು ಡಬ್ಲೂಎಸ್ಎಸ್‌ಬಿ ಕಛೇರಿಗೆ ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬಿಡಬ್ಲೂಎಸ್ಎಸ್‌ಬಿ ಅಧಿಕಾರಿಗಳು ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

Scanned with CamScanner

ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ 12 ವರ್ಷ ದಿಂದ 17 ವರ್ಷ ಲಸಿಕೆ ಅಭಿಯನಾದ ಬಗ್ಗೆ ಹಾಗೂ ಬೂಸ್ಟರ್ ಡೋಸ್ ನೀಡುತ್ತಿರುವ ಬಗ್ಗೆ ಸಭೆಯಲ್ಲಿ ಕೋರಿದರು.

ಆರೋಗ್ಯ ವೈದ್ಯಾಧಿಕಾರಿಗಳ ಪ್ರತಿನಿಧಿಯು ಕೋವಿಡ್-19 ಆಶಾ ಕಾರ್ಯಕರ್ತೆಯರು ಪ್ರತಿ ಮನೆಗೆ ಹೊಗಿ ಪ್ರತಿಯೊಬ್ಬರ ಆರೋಗ್ಯ ವಿಚಾರಿಸಿ 12 ವರ್ಷ ದಿಂದ 17 ವರ್ಷದವರಿಗೆ ಹೆಚ್ಚಿನ ಪ್ರಮಾಣದಲ್ಲಿ ಲಸಿಕೆ ತೆಗೆದು ಕೊಳ್ಳಲು ಮನಹೊಲಿಸಿ ಲಸಿಕೆ ನೀಡುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು. ಬೂಸ್ಟರ್ ಡೋಸ್ ಪಡೆಯುವಂತೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಪ್ರತಿ ನಿತ್ಯ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ಮತ್ತು ವಾಹನಗಳ ಹಾಜರಾತಿಯ ವಿವರವನ್ನು ನೀಡುವಂತೆ ಸಭೆಯಲ್ಲಿ ತಿಳಿಸಿದರು.

.. ಕಿರಿಯ ಆರೋಗ್ಯ ಪರಿವೀಕ್ಷರು ವಾರ್ಡ್ -137ರ ವ್ಯಾಪ್ತಿಯಲ್ಲಿ ಬರುವ ಬಿ.ಬಿ.ಎಂ.ಪಿ ಪೌರ ಕಾರ್ಮಿಕರು ಮತ್ತು ಗುತ್ತಿಗೆ ಪೌರ ಕಾರ್ಮಿಕರ ಹಾಜರಾತಿ ವಾಹನಗಳ ಹಾಜರಾತಿ ಸಭೆಯಲ್ಲಿ ನೀಡಿದರು,

ಮಾನ್ಯ ಅಧ್ಯಕ್ಷರು ಇತ್ತಿಚಿನ ದಿನಗಳಲ್ಲಿ ಅಕಾಲಿಕ ಮಳೆಯಿಂದ ಹನಿಗೊಳಗಾದ ಮನೆಗಳ ವಿವರ ಹಾಗೂ ಕೈಗೊಂಡ ವಿವರಗಳನ್ನು ಕೋರಿದರು ಹಾಗೂ ಚರಂಡಿಯಲ್ಲಿ ಹೂಳು ತುಂಬಿದ್ದರೆ ತೆಗೆದು ನೀರು ಮನೆಗಳಿಗೆ ಹರಿಯದಂತೆ ಕೈಗೊಂಡ ಕ್ರಮದ ಬಗ್ಗೆ ಸಭೆಯಲ್ಲಿ ಕೋರಿದರು.

ಈ ಬಗ್ಗೆ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್ ವ್ಯಾಪ್ತಿಯಲ್ಲಿ ಯಾವುದೇ ಮನೆಗಳಿಗೆ ಹಾನಿಯಾಗಿರುವುದಿಲ್ಲ, ಮಳೆಯಿಂದ ವೆಂಕಟಸ್ವಾಮಿ ಗಾರ್ಡ್‌ನ್‌ನಲ್ಲಿ ಗೋಡೆ ಕುಸಿದಿರುವ ಬಗ್ಗೆ ಮಾಹಿತಿ ಇದ್ದು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು ಹಾಗೂ ಹೆಚ್ಚಿನ ಪ್ರಮಾಣದಲ್ಲಿ ಹೂಳು ತುಂಬಿರುವ ಮೋರಿಯಲ್ಲಿ ಹೂಳು ತೆಗೆಸುವುದಾಗಿ ಸಭೆಯಲ್ಲಿ ತಿಳಿಸಿದರು.

Scanned with CamScanner

ಮಾನ್ಯ ಅಧ್ಯಕ್ಷರು ಆಪ್ತ ಮಿತ್ರ ಸ್ವಯಂ ಸೇವಕರಿಗೆ ಬಿ.ಬಿ.ಎಂ.ಪಿ. ವತಿಯಿಂದ ಉಚಿತ ತರಬೇತಿ ನೀಡಲು ಉದ್ದೇಶಿಸಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಉತ್ಸಹಿ ಯುವಕರನ್ನು ಗುರ್ತಿಸಲು ತಿಳಿಸಿದರು.

ಸಮಿತಿಯ ಸದಸ್ಯರು ಆಸಕ್ತಿ ಹೊಂದಿರುವ ಯುವಕ/ಯುವತಿಯನ್ನು ಗುರ್ತಿಸಿ ನೀಡುವುದಾಗಿ ಸಭೆಯಲ್ಲಿ ತಿಳಿಸಿದರು.

ಅಧ್ಯಕ್ಷರು ಬೆಸ್ಕಂ ಕಛೇರಿಗೆ ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರು ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ತಿಳಿಸುವಂತೆ ಸಭೆಯಲ್ಲಿ ತಿಳಿಸಿದರು

ಬೆಸ್ಕಂ ಅಧಿಕಾರಿಯವರು ವಾರ್ಡ್ 137 ವ್ಯಾಪ್ತಿಗೆ ಸಂಬಂಧಿಸಿ ಬಂದಂತಹ ದೂರುಗಳ ವಿವರ ಮತ್ತು ತಕ್ಷಣ ಸ್ಥಳಕ್ಕೆ ಬೇಟಿ ನೀಡಿ ಕ್ರಮ ಕೈಗೊಂಡಿರುವ ಬಗ್ಗೆ ಸಭೆಯಲ್ಲಿ ವಿವರಿಸಿದರು.

ಮಾನ್ಯ ಸದಸ್ಯರುಗಳು ವಾರ್ಡ್ ವ್ಯಾಪ್ತಿಯಲ್ಲಿ ಕೊಳವೆ ಭಾವಿಗಳು ದುಸ್ಥಿತಿಯಲ್ಲಿದ್ದು ಇದ್ದು ಸರಿಪಡಿಸುವಂತೆ ಸಭೆಯಲ್ಲಿ ಕೋರಿದರು.

ಮಾನ್ಯ ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ಈ ಬಗ್ಗೆ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಕಮಿಟಿ ಸದಸ್ಯರು ವಾರ್ಡ್ 137ರ ವ್ಯಾಪ್ತಿಯಲ್ಲಿ ಬರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಸ ಹಾಗೂ ಇತರೆ ತ್ಯಾಜ್ಯ ಹಾಕುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.

ಕಿರಿಯ ಆರೋಗ್ಯ ಪರೀವಿಷಕರನ್ನು ವಿಷಯದ ಬಗ್ಗೆ ಸಭೆಯಲ್ಲಿ ವಿವರಣೆ ಕೋರಿದರು.

ಕಿರಿಯ ಆರೋಗ್ಯ ಪರಿವೀಕ್ಷಕರು ಸದರಿ ವಿಷಯವು ಬಂದಿದ್ದು ಸದರಿ ಸ್ಥಳಗಳಲ್ಲಿ ತ್ಯಾಜ್ಯ ಎಸೆಯುವವರ ಬಗ್ಗೆ ನಿಗವಹಿಸುವಂತೆ ಮಾರ್ಷಲ್‌ಗಳಿಗೆ ತಿಳಿಸಿ ಬಿ.ಬಿ.ಎಂ.ಪಿ ನಿಯಮನುಸಾರ ಕ್ರಮ ಕೈಗೊಳ್ಳ ಸಭೆಯಲ್ಲಿ ಹಾಜರಾಗಿದ್ದ ಮಾರ್ಷಲ್‌ಗಳಿಗೆ ಸೂಚಿಸಿದರು.

Scanned with CamScanner

ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರ ಸಭೆಗೆ ನೀಡುವಂತೆ ಕೋರಿದರು ಹಾಗೂ ಅವಶ್ಯಕವಾಗಿ ನಡೆಯಬೇಕಾದ ಕಾಮಗಾರಿಗಳ ಬಗ್ಗೆ ವಿವರಣೆ ಕೋರಿದರು

ಸಂಚಾಲಕರು ಹಾಗೂ ಸಹಾಯಕ ಅಭಿಯಂತರರು ವಾರ್ಡ್‌ನಲ್ಲಿ ನಡೆಯುತ್ತಿರುವ ಕಾಮಗಾರಿಗಳ ವಿವರವನ್ನು ನೀಡಿದರು ಹಾಗೂ 2021-22ನೇ ಸಾಲಿನ ಕಾರ್ಯಕ್ರಮ ಪಟ್ಟಿಗಳಿಗೆ ಅಂದಾಜು ಪಟ್ಟಿ ತಯಾರಿಸಿ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ಸಲ್ಲಿಸಿರುವುದಾಗಿ ಸಭೆಯಲ್ಲಿ ವಿವರಣೆ ನೀಡಿದರು.

ಮಾನ್ಯ ಅಧ್ಯಕ್ಷರು ವಾರ್ಡ್ 136ರ ವ್ಯಾಪ್ತಿಯಲ್ಲಿ ಮಾಷಲ್‌ಗಳು ವಿಧಿಸಿದ ದಂಡದ ವಿವರವನ್ನು ಕೋರಿದರು.

ವಾರ್ಡ್-137ರ ಮಾಷಲ್ ಗಳು ಒಟ್ಟು ವಿಧಿಸಿದ ದಂಡ ಎಸ್ ಡಬ್ಲ್ಯೂಎಂ. ದಂಡ ರೂ. 3000 ಎಂದು ಸಭೆಯಲ್ಲಿ ತಿಳಿಸಿದರು ಸದರಿ ಹಣವನ್ನು ಮುಖ್ಯ ಕಛೇರಿಗೆ ಸಲ್ಲಿಸಿರುತ್ತಾರೆ.

ಇಂದಿನ ಸಭೆಯಲ್ಲಿ ಚರ್ಚಿಸಿದ ಹಾಗೂ ನಿರ್ಣಯಗಳನ್ನು ಕಾರ್ಯದರ್ಶಿ ಮತ್ತು ಸಂಚಾಲಕರು. ಸಭೆಯ ನಡಾವಳಿಗಳ ಪುಸ್ತಕದಲ್ಲಿ ದಾಖಲಿಸಿದರು. ವಂದನಾರ್ಪಣೆ ಮಾಡುವುದರ ಮೂಲಕ ಇಂದಿನ ಸಭೆಯನ್ನು ಮುಕ್ತಾಯಗೊಳಿಸಿದರು.

## ಹಾಜರಿದ್ದ ವಾರ್ಡ್ ಕಮಿಟಿ ಸದಸ್ಯರು

| ಕ್ರಮ ಸಂಖ್ಯೆ | ವಾರ್ಡ್ ಹಂತದ ಸಮಿತಿ ಹಾಗೂ ಸದಸ್ಯರುಗಳ ಹೆಸರು ಮೊಬೈಲ್ ಸಂಖ್ಯೆ: | | ಸಹಿ |
|---|---|---|---|
| 1 | ಮೊಹಮದ್ ಜಾವೀದ್. ಸಹಾಯಕ ಕಾರ್ಯಪಾಲಕ ಅಭಿಯಂತರರು(ವಸಂತನಗರ ಉಪ ವಿಭಾಗ) ಬಿ.ಬಿ.ಎಂ.ಪಿ, ದೂ. ಸಂಖ್ಯೆ: 9845720286 | ಅಧ್ಯಕ್ಷರು ಮತ್ತು ವಾರ್ಡ್‌ನ ನೋಡಲ್ ಅಧಿಕಾರಿ | |
| 2 | ಶ್ರೀ ಶಶಿಕುಮಾರ್.ಎ. ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ: 137 ಬಿ.ಬಿ.ಎಂ.ಪಿ, ದೂ. ಸಂ 8618436036 | ಸದಸ್ಯ ಕಾರ್ಯದರ್ಶಿ | |
| 3 | ಗೀತಾ ಹೆಚ್. ದೂ. 9986537126 ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ -137 | ಸದಸ್ಯರು | |
| 4 | ಸಹಾಯಕ ಕಾರ್ಯಪಾಲಕ ಅಭಿಯಂತರರ (ಕಾಮಗಾರಿ) ಜೆ.ಜೆ.ಆರ್ ನಗರ ಉಪ ವಿಭಾಗದ ರವರ ಪ್ರತಿನಿಧಿ ಶ್ರೀ ಬಾಬು (ಕೆಲಸ ಪರಿವೀಕ್ಷಕರು) ವಾರ್ಡ್-137, ದೂ. 9342582372 | ಸದಸ್ಯರು | |
| 5 | ಆರೋಗ್ಯಾಧಿಕಾರಿಗಳು, ಚಾಮರಜಪೇಟೆ ವಿಭಾಗ ರವರ ಪ್ರತಿನಿಧಿ ಬಸವಲಿಂಗಯ್ಯ ದೂ. 9686418488 | ಸದಸ್ಯರು | |

Scanned with CamScanner

| | | |
|---|---|---|
| ಶ್ರೀ ಸಿ. ಆರ್ ರವಿ ಪ್ರಸಾದ್<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845802912 | ಸದಸ್ಯರು | |
| ಶ್ರೀ ರಿಜ್ವಾನ್,<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. ದೂ. 9845262860 | ಸದಸ್ಯರು | |
| ಶ್ರೀ ರಾಜು, ದೂ.. 7676512877<br>ವಾರ್ಡ್ ಪ್ರದೇಶದಲ್ಲಿನ ಸ್ಥಳಿಯ ನಾಗರಿಕ ಕಲ್ಯಾಣ ಸಂಘದ ಪ್ರತಿನಿಧಿ. | ಸದಸ್ಯರು | |
| ಶ್ರೀಮತಿ ಆಶಾ. ದೂ. 9731317223<br>ಕಂದಾಯ ಪರಿವೀಕ್ಷಕರು | ಸದಸ್ಯರು | |
| ಸಹಾಯಕ ಕಾರ್ಯಪಾಲಕ ಅಭಿಯಂತರರು (ಘ.ತ್ಯಾ.ನಿ) ರವರ ಪ್ರತಿನಿಧಿ | ಸದಸ್ಯರು | |
| ಸಹಾಯಕ ಕಾರ್ಯಪಾಲಕ ಅಭಿಯಂತರರ (ಬಿಡಬ್ಲ್ಯೂ.ಎಸ್.ಎಸ್.ಬಿ) ರವರ ಪ್ರತಿನಿಧಿ<br>ಶ್ರೀ ಕುಮಾರ್ ಸ್ವಾಮಿ, ದೂ. 9060341644 | ಸದಸ್ಯರು | |
| ಸಹಾಯಕ ಕಾರ್ಯ ಪಾಲಕ ಅಭಿಯಂತರರು (ಬೆಸ್ಕಂ) ರವರ ಪ್ರತಿನಿಧಿ.<br>ದೂ. 9449840364 | ಸದಸ್ಯರು | |

ಕಾರ್ಯದರ್ಶಿಗಳು
...ಭಿಯಂತರರು ವಾರ್ಡ್ ಸಂಖ್ಯೆ: 137
...ರ್ಡ್ ಹಂತದ ಸಮೀತಿ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿ
ವಾರ್ಡ್ ಹಂತದ ಸಮಿತಿ, ವಾರ್ಡ್ ನಂ. 137

Scanned with CamScanner